# ಶ್ರೀಮಾತೆಯವರ ಪತ್ರಗಳು – ೬

ಅನುವಾದ: **ಪ್ರವ್ರಾಜಿಕಾ ಧರ್ಮಪ್ರಾಣಾ**

### ಪತ್ರ-೨೨

ಶ್ರೀ ಶ್ರೀ ದುರ್ಗಾ ಕೃಪೆ

೬-೧೧-೧೯೦೬

ಚಿರಂಜೀವಿಗೆ ,

ಮತ್ತೆ ಪ್ರೀತಿಯ ಮಗೂ, ಅಂಚೆಯ ಮೂಲಕ ಬಂದ ನಿನ್ನ ಕ್ಷೇಮ ಸಮಾಚಾರಗಳ ಪತ್ರ ಸಿಕ್ಕಿ ಎಲ್ಲಿಲ್ಲದ ಸಂತೋಷವಾಯಿತು. ಮೀನು ತಿಂದಿರುವೆ ಎಂದು ಕೇಳಿ ಅತ್ಯಂತ ಸಂತೋಷವಾಯಿತು. ಮತ್ತೆ ವಸಂತನನ್ನು ಈಗ ಇಂಗ್ಲೆಂಡಿಗೆ ಕಳುಹಿಸುವ ಆಲೋಚನೆ ಇಲ್ಲ. ಕಾರಣ, ಈಗ ಜನರ ಕೊರತೆ ಇದೆ. ಸ್ವಲ್ಪ ದಿನಗಳ ನಂತರ ನೀವೆಲ್ಲ ಆಲೋಚಿಸಿ ನೋಡಿ, ಯಾವಾಗ ಸಾಧ್ಯವಾಗುವುದೆಂದು ಅನ್ನಿಸುವುದೋ ಆಗ ಕಳುಹಿಸು. ಇಲ್ಲಿ ಎಲ್ಲವೂ ಕುಶಲ. ನಿಮ್ಮೆಲ್ಲರ ಕ್ಷೇಮಸಮಾಚಾರವನ್ನು ಬರೆದು ತಿಳಿಸು.

ಇತಿ, ೨೦ ಕಾರ್ತಿಕ

*ಪತ್ರ ಪಡೆದವರ ಹೆಸರು ಮತ್ತು ವಿಳಾಸ*

*Swamy Ramakrishnananda*
*Castle Kernan, Triplicane*
*Ice House, Madras*

### ಪತ್ರ-೨೩

ಓಂ ರಾಮಕೃಷ್ಣ ಶರಣಂ

೨೬.೧.೧೯೦೭
ಜಯರಾಂಬಾಟಿ
ವರ್ಷ ೧೩೧೩, ೧೬ ಮಾಘ

ದೀರ್ಘಾಯುವಾಗು.

ಪರಮ ಶುಭಾಶೀರ್ವಾದ. ವಿಶೇಷವೇನೆಂದರೆ

ನಿನ್ನ ಒಂದು ಪತ್ರ ಸಿಕ್ಕಿ ಸಮಾಚಾರಗಳನ್ನೆಲ್ಲ ತಿಳಿದುಕೊಂಡೆ. ಮತ್ತೆ ಈಗ ಮಗೂ, ನಾನು ಒಂದು ದೊಡ್ಡ ಆಪತ್ತಿಗೆ ಸಿಕ್ಕಿ ಹಾಕಿಕೊಂಡಿದ್ದೇನೆ. ಚಿಕ್ಕ ಸೊಸೆ ತವರುಮನೆಗೆ ಹೋಗಿದ್ದಳು. ಅಲ್ಲಿ ಅವಳ ಮಲತಾಯಿಯ ಜೊತೆ ಜಗಳ ಮಾಡಿ ಮನೆಗೆ ಮರಳುತ್ತಿದ್ದಳು. ಆದರೆ ಅವಳ ತಂದೆ ಅವಳನ್ನು ಹಿಡಿದು ಅವಳಿಗೆ ಹೊಡೆದು, ಬಡಿದು ಮಾಡಿ ಆಭರಣದ ಪೆಟ್ಟಿಗೆಯನ್ನು ಕಸಿದುಕೊಂಡಿದ್ದಾರೆ. ಆಭರಣದ ಬೆಲೆ ಸುಮಾರು ೫೦೦ ರೂಪಾಯಿ ಆಗುತ್ತದೆ. ಏನೇ ಮಾಡಿದರೂ ಆಭರಣ ಮತ್ತೆ ಕೊಡಲು ಒಪ್ಪುತ್ತಿಲ್ಲ. ಅವರು ಹೇಳುತ್ತಿದ್ದಾರೆ, 'ಆಭರಣವನ್ನು ಯಾರಿಗೆ ಕೊಡಲಿ? ನನ್ನ ಮಗಳು ಹುಚ್ಚಿ, ಮಗಳಿಗೆ ವಾಸಿಯಾಗ ದಿದ್ದರೆ ಆಭರಣ ಕೊಡುವುದಿಲ್ಲ' ಎಂದು. ಈ ಸೊಸೆಯಂತೂ ವಿಪರೀತ ಅತ್ತು ರಂಪಾಟ ಮಾಡುತ್ತಿದ್ದಾಳೆ. ನನಗಂತೂ ಏನು ಉಪಾಯ ಮಾಡಬೇಕೆಂದೇ ನಿಶ್ಚಯಿಸಲಾಗುತ್ತಿಲ್ಲ. ದೂರು ನೀಡೋಣ ಎಂದರೆ ಅದಕ್ಕೂ ಉಪಾಯವಿಲ್ಲ. ಕಾರಣ, ಈ ಹುಚ್ಚಿ ಏನು ಹೇಳಲು ಹೋಗಿ ಇನ್ನೇನು ಹೇಳುವಳೋ! ಇತಿ ಇಲ್ಲಿಯ ಸಮಾಚಾರ. ನಾನು ಚೆನ್ನಾಗಿದ್ದೇನೆ. ನಿನ್ನ ಕಲ್ಯಾಣಕ್ಕಾಗಿ ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

ಜಯರಾಂಬಾಟಿ, ೧೬ನೇ ಮಾಘ

ಆಶೀರ್ವಾದದೊಂದಿಗೆ ನಿನ್ನ ತಾಯಿ

ಜಯರಾಂಬಾಟಿ

*ಪತ್ರ ಪಡೆದವರ ಹೆಸರು*

*ಸ್ವಾಮಿ ರಾಮಕೃಷ್ಣಾನಂದ (ಇರಬಹುದು)*

ಶ್ರೀಮಾತೆಯವರ ಚಿಕ್ಕ ಸಹೋದರನ ಪತ್ನಿ ಸುರಬಾಲಾಳನ್ನು 'ಚಿಕ್ಕ ಸೊಸೆ' ಎಂದು ಕರೆಯುತ್ತಿದ್ದರು. ಭಕ್ತವೃಂದದವರಿಗೆ ಇವಳು 'ಪಾಗ್ಲಿ ಮಾಮಿ' (ಹುಚ್ಚಿ ಅತ್ತೆ ) ಎಂಬ ಹೆಸರಿನಿಂದಲೇ ಪರಿಚಿತಳು. ಇವಳೇ ರಾಧುವಿನ ತಾಯಿ.

### ಪತ್ರ – ೨೪

ಓಂ ರಾಮಕೃಷ್ಣ ಜಯತಿ

೨೫. ೨. ೧೯೦೭
ತಾರೀಖು ೧೩ನೇ ಫಾಲ್ಗುಣ, ಸೋಮವಾರ

ಪ್ರೀತಿಯ ಮಗೂ,

ನಿನ್ನೆ ನಿನ್ನ ಒಂದು ಪತ್ರದಲ್ಲಿ ನೋಡಿದೆ, ಏನೆಂದರೆ ನೀನು ನನಗಾಗಿ ಒಂದು ಜೋಡಿ ಸೀರೆ ಕಳುಹಿಸಿರುವೆ ಎಂದು. ಆದರೆ ಆ ಸೀರೆಯನ್ನು ಇಂದು ರಾಮಲಾಲನಿಂದ ಪಡೆದೆ. ಸಿಕ್ಕಿ ಪರಮ ಆನಂದಿತಳಾದೆ. ಸೀರೆ ತುಂಬಾ ಚೆನ್ನಾಗಿದೆ. ಶ್ರೀ ಠಾಕೂರರ ಉತ್ಸವದಂದು ನೀನು ನಿನ್ನ ಮಿತ್ರವೃಂದದವರನ್ನು ಸೇರಿಸಿ ಯಾವ ಕಾರ್ಯಗಳನ್ನು ನಡೆಸಿದ್ದೆಯೋ ಅದನ್ನು ಕೇಳಿ ತೃಪ್ತಿ ಹೊಂದಿದೆ. ಮತ್ತು ನಿನ್ನ ಮಿತ್ರವೃಂದಕ್ಕೆ ನನ್ನ ಆಶೀರ್ವಾದ ತಿಳಿಸು. ಇದರಿಂದ ಅವರಿಗೆ ಠಾಕೂರರಲ್ಲಿ ಭಕ್ತಿ ಉಂಟಾಗಲಿ. ಅಲ್ಲದೆ ಮಗೂ, ನೀನು

ತುಂಬಾ ಹುಷಾರಾಗಿರು ಮತ್ತು ಯಾವಾಗಲೂ ನಿನ್ನ ಮಿತ್ರ ವೃಂದದೊಂದಿಗೆ ಆನಂದಿಸು. ನಿನಗೆ ನನ್ನ ಆಶೀರ್ವಾದ.

ಇತೀ ನಿನ್ನ ಶುಭಾಕಾಂಕ್ಷಿ, ತಾಯಿ

ನಾನು ಕೊಲ್ಕತ್ತಾಕ್ಕೆ ಹೋಗುವುದು ಯಾವಾಗ ಎಂದು ನಿಶ್ಚಯವಾಗಿಲ್ಲ.

ಸದ್ಯ ಚೆನ್ನಾಗಿದ್ದೇನೆ, ಮತ್ತು ಮನೆಯವರೆಲ್ಲಾ ಚೆನ್ನಾಗಿದ್ದಾರೆ.

ಇತಿ,

(ನಿನ್ನ ತಾಯಿ)

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***

*Swami Ramakrishnananda*
*Castle Kernan (Old Ice House)*
*Triplicane , Madras*

## ಪತ್ರ - ೨೫

ಓಂ ರಾಮಕೃಷ್ಣರ ಕೃಪೆ

೧೦.೩.೧೯೦೭

ಪರಮ ಶುಭಾಶೀರ್ವಾದ ಮೊದಲು ತಿಳಿಸಿ,

ವಿಶೇಷವೇನೆಂದರೆ

ಪ್ರೀತಿಯ ಮಗೂ, ನಿನ್ನ ಪತ್ರ ಸಿಕ್ಕಿ ನಾನು ಎಲ್ಲಿಲ್ಲದಷ್ಟು ಸಂತೋಷಗೊಂಡೆ. ಮಠದ ಸಮಾಚಾರಗಳನ್ನು ಬರೆದಿರುವೆ. ಇದರಿಂದ ಪರಮ ತೃಪ್ತಿಯನ್ನು ಹೊಂದಿದೆ. ಭಗವಂತನು ನಿನಗೆ ಅತ್ಯಂತ ಭಕ್ತಿಯನ್ನು ನೀಡಲಿ. ಇದನ್ನೇ ನಾನು ಪ್ರಾರ್ಥಿಸುತ್ತಿದ್ದೇನೆ. ಆದರೆ ಮಗೂ, ನಾನು ದೊಡ್ಡ ವಿಪತ್ತಿಗೆ ಬಿದ್ದಿದ್ದೇನೆ. ನಮ್ಮ ದೊಡ್ಡ ಸೊಸೆ ೨೨ನೇ ಫಾಲ್ಗುಣ ದಿವಸದಂದು ಬೆಳಿಗ್ಗೆ ಸ್ನಾನ, ಆಹಾರ ಮುಗಿಸಿದ ಮೇಲೆ ಹಠಾತ್ತಾಗಿ ಹೊಟ್ಟೆಯಲ್ಲಿ ಒಂದು ನೋವು. ಮತ್ತು ೨, ೪ ಸಲ ವಾಂತಿ, ಭೇದಿ ಮಾಡಿ ರಾತ್ರಿ ೯ಗಂಟೆಗೆ ಸತ್ತು ಹೋದಳು. ಇದರಿಂದ ನನ್ನ ಮನಸ್ಸಿಗೆ ಅತ್ಯಂತ ದು:ಖವಾಗಿದೆ. ಸದ್ಯ ಮನೆಯಲ್ಲಿ (ಎಲ್ಲರೂ) ಒಂದು ರೀತಿ ಚೆನ್ನಾಗಿದ್ದಾರೆ. ನಿನಗೆ ನನ್ನ ಆಶೀರ್ವಾದ ಮತ್ತು ಎಲ್ಲರಿಗೂ ಆಶೀರ್ವಾದ ತಿಳಿಸು.

ಇತಿ ,

೧೩೧೩ ವರ್ಷ , ತಾರೀಖು ೨೬ನೇ ಫಾಲ್ಗುಣ

ನಿನ್ನ ಸ್ನೇಹಮಯಿ ಮಾತೆ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***

*The Swami Ramakrishnanandaji*
*The Castle Kernan (Old Ice House )*
*Triplicane, Madras*

ದೊಡ್ಡ ಸೊಸೆ ಎಂದರೆ ಶ್ರೀಮಾತೆಯವರ ಹಿರಿಯ ಸಹೋದರ ಪ್ರಸನ್ನಕುಮಾರನ ಪತ್ನಿ.

## ಪತ್ರ -೨೬

ಶ್ರೀ ಶ್ರೀ ಕಾಳಿ

Postal Date

೧೯.೭.೧೯೦೭

ಚಿರಂಜೀವಿಗೆ,

ಪ್ರೀತಿಯ ಮಗೂ, ಈಗ ನೀನು ಕಳುಹಿಸಿರುವ ೮ ರೂಪಾಯಿ ಸಿಕ್ಕಿತು. ಮತ್ತು ನೀನು ನಂದನ ಸಹೋದರ ಪುತ್ರನಿಗಾಗಿ ತುಂಬಾ ಚಿಂತೆಯನ್ನೇನೂ ಮಾಡುವುದು ಬೇಡ. ಕಾರಣ, ನೀನು ಸುಶಿಕ್ಷಿತ ನಾಗಿರುವೆ. ಎಲ್ಲವೂ ಈಶ್ವರನ ಇಚ್ಛೆ. ಕೇಳಿದೆ, ನೀನು ಬರೀ ಚಪಾತಿ ಇತ್ಯಾದಿ ಮಾತ್ರ ಆಹಾರ ತೆಗೆದುಕೊಳ್ಳುತ್ತಿರುವೆ ಎಂದು. ಇದರಿಂದ ನಿನ್ನ ಶರೀರ ಅತ್ಯಂತ ದುರ್ಬಲವಾಗುವುದು. ನಾನು ಹೇಳಿದಂತೆ ಹಿಂದಿನ ತರಹವೇ ಆಹಾರಾದಿ ಸೇವಿಸಬೇಕು. ನಾನು ಕೊಲ್ಕತ್ತಾಕ್ಕೆ ಹೋದರೆ ಯಾರ ಬಳಿ ಇರಲಿ? ನೀನು ಮಾತ್ರ ನನಗಿ ರುವುದು. ಮತ್ತು ಚಾರುವಿನ ಅಸೌಖ್ಯದ ಬಗ್ಗೆ ಕೇಳಿ ಮನಸ್ಸಿನಲ್ಲಿ ಕಷ್ಟದಿಂದಿದ್ದೇನೆ. ಚಾರುವಿನ ಸೌಖ್ಯದ ಸಮಾಚಾರ ನೀಡಿ ನೆಮ್ಮದಿ ಯನ್ನು ಕೊಡಬೇಕು. ಇಲ್ಲಿ ಎಲ್ಲವೂ ಕ್ಷೇಮ. ನಿಮ್ಮೆಲ್ಲರ ಕ್ಷೇಮದ ಸಮಾಚಾರವನ್ನು ಬರೆದು ತಿಳಿಸು.

ಆಶೀರ್ವಾದದೊಂದಿಗೆ

ಶ್ರೀಮಾತೆ

***ಪತ್ರ ಪಡೆದವರ ಹೆಸರು***

*ಮಹೇಂದ್ರನಾಥ ಗುಪ್ತ*

## ಪತ್ರ -೨೭

ಶ್ರೀ ಶ್ರೀ ಗುರುದೇವರ
ಶ್ರೀ ಶ್ರೀ ಚರಣ ಕೃಪೆ

೧೯.೧೧.೧೯೦೭

ಜಯರಾಂಬಾಟಿ, ೩ನೇ ಆಗ್ರಹಾಯಣ

ಪ್ರೀತಿಯ ಮಗೂ,

ನಿನ್ನ ಪತ್ರದಲ್ಲಿ ಶ್ರೀ ಶ್ರೀ ಠಾಕೂರರ ಹೆಸರಿನಲ್ಲಿ ಅಲ್ಲಿ ಮಠ ಆರಂಭವಾಗಿದೆ ಎಂದು ತಿಳಿದು ಅತ್ಯಂತ ಆನಂದಿತಳಾದೆ. ಅಲ್ಲಿ ಅವರ ಕೆಲಸ ಚೆನ್ನಾಗಿ ನಡೆಯಲೆಂದು ಅವರ ಬಳಿ ಪ್ರಾರ್ಥಿಸು ತ್ತಿದ್ದೇನೆ. ಇಲ್ಲಿ ಎಲ್ಲವೂ ಕ್ಷೇಮ. ಇಲ್ಲಿ ಜಗದ್ಧಾತ್ರೀ ಪೂಜೆ ಮನೋ ಹರವಾಗಿ ನಡೆಯಿತು. ಕೃಷ್ಣಲಾಲ್, ಆಶು ಮತ್ತು ಗಣೇನ್ ಇಲ್ಲಿ ದ್ದಾರೆ. ನನ್ನ ಆರೋಗ್ಯಕ್ಕೆ ಕೊರತೆ ಇಲ್ಲ. ನೀವೆಲ್ಲರೂ ಚೆನ್ನಾಗಿ ದ್ದೀರೆಂದು ಆಶಿಸುತ್ತಿದ್ದೇನೆ. ನಿನಗೆ ಆಶೀರ್ವಾದ.

ಇತಿ ನಿಮ್ಮೆಲ್ಲರ ತಾಯಿ

***ಪತ್ರ ಪಡೆದವರ ಹೆಸರು***

*ಸ್ವಾಮಿ ರಾಮಕೃಷ್ಣಾನಂದ (ಸಂಭವನೀಯ)*